ಓ.ಎಸ್. ನಂಃ 198/2019

ಪಿ.ಡಬ್ಲ್ಯೂಃ 1

**ದಿನಾಂಕ 04.08.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ.ಕೆ.ಬಿ.ಜೆ ವಕೀಲರಿಂದಃ**

20. ನಿಪಿ–23 ರಿಂದ ನಿಪಿ–30 ರ ದಾಖಲೆಗಳು ಜಮೀನು ಖರೀದಿಸಿದ ದಾಖಲೆಗಳಾಗಿರುತ್ತವೆ. ನಿಪಿ–24 ರ ದಾಖಲೆಯಲ್ಲಿ ಖರೀದಿದಾರನ ಹೆಸರು ಚಿಕ್ಕವೀರಯ್ಯ ಅಂತ ಇರುತ್ತದೆಯೇ ಹೊರತು ಚಿಕ್ಕೀರಯ್ಯ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–25 ರ ದಾಖಲೆಯಲ್ಲಿಯೂ ಸಹ ಮಾಲೀಕರ ಹೆಸರು ಚಿಕ್ಕವೀರಯ್ಯ ಅಂತ ಇರುತ್ತದೆಯೇ ಹೊರತು ಚಿಕ್ಕೀರಯ್ಯ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ.

21. ನನ್ನ ಆಧಾರ್ ಕಾರ್ಡ್, ರೇಶನ್ ಕಾರ್ಡ್ ಮತ್ತು ತಮ್ಮಯ್ಯ ರವರ ಮರಣ ಪ್ರಮಾಣ ಪತ್ರದಲ್ಲಿ ಆಲಿಯಾಸ್ ಚಿಕ್ಕೀರಯ್ಯ ಎಂದು ತಿದ್ದುಪಡಿ ಮಾಡಿಸಿದ ನಂತರದಲ್ಲಿ ನಾನು ನಿಪಿ–27 ರ ಪಹಣಿಯಲ್ಲಿ ಚಿಕ್ಕೀರಯ್ಯ @ ತಮ್ಮಯ್ಯ ಎಂದು ನಾನು ತಿದ್ದುಪಡಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 29.05.1995 ರಂದು ನಿಮ್ಮ ತಂದೆಯಾದ ತಮ್ಮಯ್ಯ ರವರ ಹೆಸರಿಗೆ ಜಮೀನು ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯ ಹೆಸರಿಗೆ ಯಾವುದೇ ಜಮೀನನ್ನು ಸರ್ಕಾರವು ಮಂಜೂರು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

22. ನಿಪಿ–23 ರ ದಾಖಲೆಯಲ್ಲಿ ಖರೀದಿದಾರನ ಹೆಸರು ದೊಡ್ಡೀರಯ್ಯನ ಮಗ ಚಿಕ್ಕೀರಯ್ಯ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ–23 ರಲ್ಲಿರುವ ಖರೀದಿದಾರನಾದ ದೊಡ್ಡೀರಯ್ಯನ ಮಗ ಚಿಕ್ಕೀರಯ್ಯ ಪ್ರತಿವಾದಿ ಸಂಖ್ಯೆ: 1(ಎ) ರವರಾದ ಸುರೇಶ ರವರ ತಾತ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 518/2014 ರಲ್ಲಿ ಈ ದಾವೆಯ ಆಸ್ತಿಗೆ ನೀವು ಮಾಲೀಕರು ಎಂದು ನ್ಯಾಯಾಲಯವು ತೀರ್ಪು ನೀಡಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದು ಸುಳ್ಳು ಎಂದು ನುಡಿದಿರುತ್ತಾರೆ. ನಮಗೂ ಮತ್ತು ದಾವಾ ಆಸ್ತಿಗೂ ಯಾವುದೇ

ಸಂಬಂಧವಿರದಿದ್ದರೂ ಸಹ ದಾವಾ ಆಸ್ತಿಯು ಪ್ರತಿವಾದಿಯರಿಗೆ ಸೇರಿದ್ದರೂ ಸಹ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**